ಲಾಗುವುದು. ಸೀಮೆ ಎಣ್ಣೆಯನ್ನು ರಾಜ್ಯಕ್ಕೆ ಕೇಂದ್ರ ಸರ್ಕಾರವು ಬಿಡುಗಡೆ ಮಾಡುತ್ತಿದ್ದು ಅದಿಗೆ ಮತ್ತು ಬೆಳಕಿನ ವ್ಯವಸ್ಥೆಗಾಗಿ ಬಿಡುಗಡೆ ಮಾಡಬೇಕೆಂದು ಕೇಂದ್ರ ಸರ್ಕಾರದ ನಿರ್ದೇಶನವಿದೆ. ಆದ್ದರಿಂದ ಕೈಗಾರಿಕೆ ಮತ್ತು ಇತರ ಉದ್ದೇಶಗಳಿಗೆ ಬಳಸುವ ಸೀಮೆ ಎಣ್ಣೆಯನ್ನು ಕೈಗಾರಿಕಾ ಬೆಲೆಯಲ್ಲಿ ವಿತರಿಸಲಾಗುತ್ತಿದೆ. ಜನವರಿ ೧೯೬೭ ರಿಂದ ಈ ರೀತಿಯ ಎರಡು ಬೆಲೆಗಳನ್ನು ಜಾರಿಗೆ ತರಲಾಗಿದೆ. ಪಂಪ್‌ಸೆಟ್ಟುಗಳಿಗೆ ಬಳಸುವ ಸೀಮೆ ಎಣ್ಣೆಯನ್ನು ಕೈಗಾರಿಕಾ ಸೀಮೆ ಎಣ್ಣೆಯ ಬೆಲೆಯಲ್ಲಿಯೇ ಮಾರಲಾಗುತ್ತಿದೆ. ಕೇಂದ್ರ ಸರ್ಕಾರದ ಅನುಮತಿ ದೊರೆತರೆ ಮನೆ ಬಳಕೆಯ ದರದಲ್ಲೇ ಪಂಪ್ ಸೆಟ್ಟುಗಳಿಗೂ ಸೀಮೆ ಎಣ್ಣೆ ಒದಗಿಸಬಹುದು.

೩. ಉಡುಪಿ ತಾಲ್ಲೂಕು ಬೈಲೂರು ಮಂಡಲ ಪಂಚಾಯತಿಗೆ ಕಂಡಿಯುವ ನೀರಿನ ಯೋಜನೆ ಮಂಜೂರಾತಿಯಲ್ಲಿ ವಿಳಂಬ

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಅಧ್ಯಕ್ಷರೇ, ಉಡುಪಿ ತಾಲ್ಲೂಕಿನ ಬೈಲೂರು ಮಂಡಲ ಪಂಚಾಯತ್‌ಗೆ ೧೯೭೬ ರಿಂದ ಉಡುಪಿ ಅರ್ಬನ್ ವಾಟರ್ ಸಪ್ಲೈ ಸ್ಕೀಂ ಮೂಲಕ ನೀರು ಸರಬರಾಜು ಆಗುತ್ತಿದೆ. ಉಡುಪಿ ನಗರಸಭೆಯ ಹೊರವಲಯದಲ್ಲಿರುವ ಬೈಲೂರು ಮಂಡಲದಲ್ಲಿ ಕಳೆದ ೧೦-೧೨ ವರ್ಷಗಳಲ್ಲಿ ಜನಸಂಖ್ಯೆ ಶೇಕಡಾ ೩೫ ರಷ್ಟು ಏರಿದೆ. ಈಗಿರುವ ನೀರು ಪೂರೈಕೆ ಅಪೂರ್ಣ ಮತ್ತು ಅಸಮರ್ಪಕ ಆದ ಪ್ರಯುಕ್ತ ಬೈಲೂರು ಮಂಡಲ ಪಂಚಾಯಿತಿಯು ೭೬ ಬೆಡದ ಬೆಟ್ಟು ಗ್ರಾಮಕ್ಕೆ ನಳ ನೀರು ಒದಗಿಸಲು ರೂ. ೯,೨೫,೦೦೦ ಗೆ ಲೈನ್ ಎಸ್ಟಿಮೇಟ್‌ನ್ನು ಉಡುಪಿಯ ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದವರು ತಯಾರಿಸಿ ಸರ್ಕಾರಕ್ಕೆ ಮಂಜೂರಾತಿಗೆ ಕಳುಹಿಸಿರುತ್ತಾರೆ. ಆದರೆ ಅದಕ್ಕೆ ಇನ್ನೂ ಮಂಜೂರಾತಿ ದೊರೆತಿಲ್ಲ. ಈ ವಿಳಂಬದಿಂದಾಗಿ ನೀರಲ್ಲದೆ ಬಾಯಾರಿದ ಬೈಲೂರಿನ ಜನ ಬಳಲಿ ಬಸವಳಿಯುವಂತಾಗಿದೆ. ಎಲ್ಲ ಕಡೆಗೂ ನೀರು ಕೊಟ್ಟಿದ್ದೇನೆ ಎಂದು ಸಾರುತ್ತಿರುವ ನೀರು ಮಂತ್ರಿಗಳು ಇಲ್ಲಿಗೇಕೆ ತಾರತಮ್ಯ ಮಾಡಿದ್ದಾರೆ ? ಯಾವಾಗ ಮಂಜೂರಾತಿ ದೊರೆತೀತು ಎಂದು ಕೇಳ ಬಯಸುತ್ತೇನೆ.

ಶ್ರೀ ಎಂ. ರಘುಪತಿ (ವಿಮಾನುಗಾರಿಕೆ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆರೋಗ್ಯ ಸರಿಯಾಗಿಲ್ಲದಿರುವುದರಿಂದ ಮಾನ್ಯ ಸದಸ್ಯರಿಗೆ ನಾನೆ ಉತ್ತರವನ್ನು ಒದಗಿಸಿಕೊಡುತ್ತೇನೆ.

೪. ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಪಾಣೆ ಮಂಗಳೂರು ಸೇತುವೆಯನ್ನು ಹೊಸದಾಗಿ ನಿರ್ಮಿಸುವುದರ ಬಗ್ಗೆ

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ಅಧ್ಯಕ್ಷರೇ, ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ನಂ. ೪೮ ರಲ್ಲಿರುವ ಪಾಣೆ ಮಂಗಳೂರು ಸೇತುವೆ ತೀರಾ ಹಳೆಯದು ಮತ್ತು ಅಗಲ ಕಿರಿದಾದುದು. ಆದಷ್ಟು ಬೇಗ ಹೊಸ ಸೇತುವೆ ಆಗಬೇಕು. ಅಷ್ಟರತನಕ ಇಕ್ಕಟ್ಟಾದ ಸೇತುವೆಯಲ್ಲಿ ಕಿಕ್ಕಿರಿಯುವ ವಾಹನ ಸಂಚಾರವನ್ನು ನಿಯಂತ್ರಿಸಬೇಕು. ಅದಕ್ಕಾಗಿ ಸೇತುವೆಯ ಎರಡು ಬದಿಗಳಲ್ಲಿ ಸಂಚಾರಿ ಆರಕ್ಷಕ ಸಿಬ್ಬಂದಿಗಳನ್ನು ನಿಯೋಜಿಸಬೇಕು. ವಾಹನ ಚಾಲಕರ ಮೇಲಾಟದಿಂದ ಅನೇಕ ವೇಳೆ ಆಗುವ "ವಾಹನ ಸ್ಥಗಿತ" (ಟ್ರಾಫಿಕ್ ಜಾಮ್) ತಪ್ಪಿಸಬೇಕು ಎಂದು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ನೀಡಿದ ಉತ್ತರದ ಕಾಪಿಯನ್ನು ಲಗತ್ತಿಸಲಾಗಿದೆ)

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಬಳಿ ನೇತ್ರಾವತಿ ನದಿಯ ಮೇಲೆ ರಾಷ್ಟ್ರೀಯ ಹೆದ್ದಾರಿಯಲ್ಲಿರ ಮೇಲೆ ಒಂದು ಹಳೆಯ ಸೇತುವೆ ಇದ್ದು, ಅದರ ಅಗಲ ತೀರಾ ಕಡಿಮೆ ಇದೆ. ಆದರಿಂದಾಗಿ ಆಗಾಗ್ಗೆ ಸಂಚಾರ ಸ್ಥಗಿತಗೊಳ್ಳುತ್ತಿದೆ. ಈ ಹೆದ್ದಾರಿಯಲ್ಲಿ ಸಂಚಾರ ದಿನೇ ದಿನೇ ಜಾಸ್ತಿಯಾಗುತ್ತಿದ್ದು ಇನ್ನೊಂದು ಸೇತುವೆಯನ್ನು ನಿರ್ಮಿಸುವ ಅಗತ್ಯ ಕಂಡು ಬಂದಿದ್ದು, ರಾಷ್ಟ್ರೀಯ ಹೆದ್ದಾರಿ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರು ಹೊಸ ಸೇತುವೆಯನ್ನು ಕಟ್ಟಲು ರೂ. ೪ ಕೋಟಿ ವೆಚ್ಚದ

ನಕ್ಷೆ ಮತ್ತು ಅಂದಾಜುಗಳನ್ನು ತಯಾರಿಸಿ ದೆಹಲಿಯ ಭೂ ಸಾರಿಗೆ ಮಂತ್ರಾಲಯಕ್ಕೆ ಕಳುಹಿಸಲಾಗಿದೆ ಎಂದು ತಿಳಿದು ಬಂದಿದೆ.

ಪ್ರಸ್ತುತ ಸಮಸ್ಯೆಯನ್ನು ಬಗೆಹರಿಸಲು ಸೇತುವೆಯ ಎರಡೂ ಕಡೆ ಟ್ರಾಫಿಕ್ ಸಿಗ್ನಲ್‌ಗಳನ್ನು ಸ್ಥಾಪಿಸುವ ಬಗ್ಗೆ ಬೆಂಗಳೂರು ಐ.ಟಿ.ಐ.ನಿಂದ ಅಂದಾಜುಗಳನ್ನು ಪಡೆದು ಮಂಗಳೂರು ರಾಷ್ಟ್ರೀಯ ಹೆದ್ದಾರಿ ವಿಭಾಗದ ಎಕ್ಸಿಕ್ಯುಟೀವ್ ಇಂಜಿನಿಯರ್‌ನವರಿಗೆ ಕಳುಹಿಸಲಾಗಿದೆ,

ಈ ಸೇತುವೆಯ ಮೇಲೆ ಸಂಚಾರವನ್ನು ನಿಯಂತ್ರಿಸಲು ಬಂಟ್ವಾಳ ಪೋಲೀಸ್ ಸಿಬ್ಬಂದಿಯನ್ನು ಕಳುಹಿಸಲಾಗಿತ್ತಿದೆ, ಮುಂದೆ ಹೊಸ ಸೇತುವೆ ಕಟ್ಟುವ ತನಕ ಇಲ್ಲಿನ ಸಂಚಾರವನ್ನು ನಿಯಂತ್ರಿಸಲು ಅಧಿಕ ಸಿಬ್ಬಂದಿಯನ್ನು ಒದಗಿಸುವುದನ್ನು ಪರಿಶೀಲಿಸಲಾಗುವುದು.

೫. ಶ್ರೀಮತಿ ಯು. ವತ್ಸಲ ಅವರ ಜನ್ಮ ದಿನಾಂಕದ ತಿದ್ದುಪಡಿ ಮಾಡುವಲ್ಲಿ ವಿದ್ಯಾ ಇಲಾಖೆಯಿಂದ ವಿಳಂಬವಾಗಿರುವುದು

ಶ್ರೀ ಬಸವರಾಜ್.—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿರುವ ಶ್ರೀಮತಿ ಯು. ವತ್ಸಲ, ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿ ಇವರು ತಮ್ಮ ಜನ್ಮ ದಿನಾಂಕದ ತಿದ್ದುಪಡಿಗಾಗಿ (ಎಸ್.ಎಸ್.ಎಲ್.ಸಿ. ಸರ್ಟಿಫಿಕೇಟ್‌ನಲ್ಲಿ) ಕೋರ್ಟಿನಲ್ಲಿಆದ ತೀರ್ಮಾನದಂತೆ (ಡಿಕ್ರಿಪಾಸ್ಡ್ ಇನ್ ಓ.ಎಸ್. ನಂ. ೫೨-೬೯, ದಿನಾಂಕ ೧೪.೯.೧೯೮೦) ಅದನ್ನು ಉಲ್ಲೇಖಿಸಿ ಡಿ.ಡಿ.ಸಿ ಐ ಮಂಗಳೂರು, ಇವರಿಗೆ ಸರ್ಟಿಫಿಕೇಟ್‌ನಲ್ಲಿನ ಜನ್ಮದಿನಾಂಕವನ್ನು ನ್ಯಾಯಲಯದ ನಿರ್ಣಯದಂತೆ ಬದಲಾವಣೆ ಮಾಡಿ ಕೊಡಬೇಕೆಂದು ೮-೧-೧೯೮೧ ರಂದು ಮನವಿ ಮಾಡಿಕೊಂಡಿದ್ದರು. ತದನಂತರ ಇಲಾಖೆಯ ಮೇಲಾಧಿಕಾರಿಗಳಿಗೂ ಸಾಕಷ್ಟು ಭಾರಿ ಅರ್ಜಿ ಮೂಲಕ ಮನವಿ ಮಾಡಿಕೊಂಡಿದ್ದರೂ ಯಾವುದೇ ರೀತಿಯಲ್ಲಿ ಫಲಕಾರಿಯಾಗಲಿಲ್ಲ. ಕೇವಲ ಒಂದು ಸರ್ಟಿಫಿಕೇಟಿನಲ್ಲಿನ ಜನ್ಮದಿನಾಂಕವನ್ನು ಕಾನೂನಿಗೆ ಅನ್ವಯವಾಗಿ ತಿದ್ದುಪಡಿ ಮಾಡಲು ೮ ವರ್ಷಗಳನ್ನು ಇಲಾಖೆಯು ತೆಗೆದುಕೊಳ್ಳುವುದಾದರೆ ಜನ ಸಾಮಾನ್ಯರ ಗತಿ ಏನು ? ಅಧಿಕಾರಿಗಳ ನಿರ್ಲಕ್ಷದಿಂದ ಉಂಟಾದ ತೊಂದರೆಗೆ ಪರಿಹಾರವೇನು ? ಈ ರೀತಿಯಲ್ಲಿ ವಿದ್ಯಾ ಇಲಾಖೆ ಕಾರ್ಯ ನಿರ್ವಹಿಸಿದರೆ ಹೇಗೆ ?

ಆದ್ದರಿಂದ ಸರಕಾರದವರು ಕೂಡಲೇ ಸಂಬಂಧಪಟ್ಟವರಿಗೆ ನಿರ್ದೇಶಿಸುವುದರ ಮೂಲಕ ಸದರಿ ಯವರ ಎಸ್.ಎಸ್.ಎಲ್.ಸಿ. ಸರ್ಟಿಫಿಕೇಟ್‌ನಲ್ಲಿ ಕಾನೂನಿನನ್ವಯ ಜನ್ಮ ದಿನಾಂಕವನ್ನು ತಿದ್ದುಪಡಿ ಮಾಡಿಕೊಡುವಂತೆ ಸೂಕ್ತ ಆದೇಶವನ್ನು ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ ಈ ರೀತಿ ಜನ್ಮ ದಿನಾಂಕವನ್ನು ಬದಲಾಯಿಸುವುದಕ್ಕೆ ಸಂಬಂಧಪಟ್ಟವರಿಗೆ ಸೂಕ್ತ ಆದೇಶವನ್ನು ನೀಡುತ್ತೇನೆ.

೬. ಸಂಕೇಶ್ವರ ಗಡ್‌ಹಿಂಗಲನ್ ಗಡಿ ಒಳಗೆ ರಸ್ತೆಯ ಕೆಲಸ ಸ್ಥಗಿತವಾಗಿರುವುದರ ಬಗ್ಗೆ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸಂಕೇಶ್ವರ ಗಡ್‌ಹಿಂಗೆಲನ್ ಗಡಿ ಒಳಗೆ ರಸ್ತೆಯ ಕೆಲಸವು ಪ್ರಾರಂಭವಾಗಿ ಸ್ಥಗಿತಗೊಂಡಿದೆ. ಸದನದಲ್ಲಿ ಲೋಕೋಪಯೋಗಿ ಮಂತ್ರಿಗಳು ನೀಡಿರುವ ಆಶ್ವಾಸನೆಯಂತೆ ಈ ಕೆಲಸಕ್ಕೆ ಪ್ರಾರಂಭವಾಗಿತ್ತು ಆದರೆ ಈಗ ಕೆಲಸ ಸ್ಥಗಿತ ಗೊಂಡಿರುವುದರಿಂದ ಸಾರ್ವಜನಿಕರಲ್ಲಿ ಚರ್ಚೆಗೆ ಒಂದು ವಿಷಯವಾಗಿದೆ. ಮಹಾರಾಷ್ಟ್ರದ ಗಡಿಯ ಒಳಗೆ ರಸ್ತೆಯನ್ನು ರಾಜ್ಯದ ಘನತೆಯ ದೃಷ್ಟಿಯಿಂದ ಮಾಡಿಕೊಡುವುದಾಗಿ ಭರವಸೆ ವಿಫಲವಾಗುತ್ತ ದೆಂದು ಕಂಡು ಬರುತ್ತಿದೆ. ರಸ್ತೆಗೆ ಡಾಂಬರೀಕರಣ ಮಾಡುವುದು ಹಾಗೂ ಸೇತುವೆಗಳನ್ನು ಅಗಲ ಮಾಡುವುದಕ್ಕಾಗಿ ಹಣದ ವ್ಯವಸ್ಥೆ ಕೂಡಲೇ ಮಾಡಿ ರಸ್ತೆಯ ಡಾಂಬರೀಕರಣದ ಕೆಲಸವನ್ನು ಮೇ ತಿಂಗಳ ಒಳಗಾಗಿ ಮಾಡದೆ ಹೋದಲ್ಲಿ ಈಗಾಗಲೇ ಮಾಡಿರುವ ರಸ್ತೆ ಮಳೆಗಾಲದಲ್ಲಿ ಸಂಪೂರ್ಣವಾಗಿ ಹಾಳಾಗುತ್ತದೆ. ಈ ರಸ್ತೆಯ ಮೇಲೆ ಸಾಕಷ್ಟು ವಾಹನಗಳ ಸಂಚಾರವಿದ್ದು ಮಹಾರಾಷ್ಟ್ರದ ಹದ್ದಿನಲ್ಲಿ ರಸ್ತೆಯ ಗುಣಮಟ್ಟ ಒಳ್ಳೆಯದಿದ್ದು ಕರ್ನಾಟಕ ಹದ್ದಿನಲ್ಲಿಯ ರಸ್ತೆಯು ಮೇಲೆ